

ಯಕ್ಷಗಾನ ಕಲಾವಿದ ರಾಹುಲ ಹಿಂದಿನ ದಿನದ ರಾತ್ರಿಯ ಯಕ್ಷಗಾನ ಮುಗಿಸಿ ಬೆಳಿಗ್ಗೆ ಬಂದು ವರಾಂಡದಲ್ಲಿ ಮಲಗಿದ್ದ. ಅವನಿಗೆ ಯಾರೋ ಕರೆದಂತೆ ಅನಿಸಿ ತಟ್ಟನೆ ಎದ್ದು ಕುಳಿತ. ನೋಡಿದರೆ ಎದುರಿಗೆ ಭಾರತಿ! ಅವನ ಪಿ.ಯು.ಸಿಯ ಕ್ಲಾಸ್‌ಮೆಟ್. ಅಸ್ತವ್ಯಸ್ತವಾಗಿ ಬಿದ್ದಿದ್ದ ಹೊದಿಕೆಯನ್ನು ಕಾಲಿನ ಸುತ್ತ ಎಳೆದು ಚಕ್ಕಳ ಬಕ್ಕಳ ಕುಳಿತನು. ಎಷ್ಟು ಹೊತ್ತಿಗೆ ಬಂದೆ ಮಾರಾಯ್ತಿ? ಗಂಟೆ ಎಷ್ಟು? ಒಳ್ಳೆ ನಿದ್ದೆ ಎಂದ. ಭಾರತಿ ಅಯ್ಯೋ ಮಾರಾಯ ನಾನು ಬಂದು ಸುಮಾರು ಹೊತ್ತಾಯಿತು. ನಿನ್ನ ಗೊರಕೆ ಮೈಲುದ್ದ ಕೇಳಿಸ್ತಾ ಇತ್ತು. ನಿನ್ನ ಅಂಗಳದ ದಣಪೆಯು ನಿನ್ನ ಗೊರಕೆಯ ದೆಸೆಯಿಂದ ನಡುಗುತ್ತಾ ಇತ್ತು. ರಾತ್ರಿ ಎಷ್ಟು ಕುಡಿದೆಯೋ ಪುಣ್ಯಾತ್ಮ. ಮನೆಯ ಬಾಗಿಲು ಸೈತ ಹಾಕಿಕೊಳ್ಳಲಿಲ್ಲ. ಅದು ಅನುಕೂಲವೇ ಆಯಿತು. ಗಂಟೆ ಈಗ ಹನ್ನೊಂದು ಎಂದು ಅವನೆದುರಿನ ಗೋಡೆಗೊರಗಿ ಸಲುಗೆಯಲ್ಲಿ ಮಾತಾಡುತ್ತಾ ಕುಳಿತಳು ರಾಹುಲ ಜೋರಾಗಿ ಆಕಳಿಸಿ ಪಕ್ಕದಲ್ಲಿ ಇಟ್ಟಿದ್ದ ಸಿಗರೇಟು ಪ್ಯಾಕಿಗೆ ಕೈ ಹಾಕಿದ. ಅಯ್ಯೋ ಮಾರಾಯ ಎದ್ದ ಕೂಡಲೇ ಸಿಗರೇಟು ಎಳೆಯಬೇಕಾ? ಮೊದಲು ಹೋಗಿ ಹಲ್ಲುಜ್ಜಿಕೊಂಡು ಬಂದು ಕುಳಿತುಕೋ, ನಿನ್ನ ಬಾಯಿಯಿಂದ ನೀನು ಕುಡಿದ ವಾಸನೆ ಇಳಿದೇ ಇಲ್ಲ. ಕಣ್ಣು ಕೆಂಪಾಗಿದೆ. ಅಷ್ಟು ಹೊತ್ತಿಗೆ ನಾನು ಚಾ ತಯಾರು ಮಾಡುತ್ತೇನೆ ಎಂದಳು. ರಾಹುಲ ನಗುತ್ತಾ ಅಲ್ಲೋ ಮಾರಾಯ್ತಿ, ನನ್ನ ಬಗ್ಗೆ ಕಾಂಟ್ರಾಕ್ಟ್ ತೆಗೆದುಕೊಳ್ಳಲು ಯಾರು ಹೇಳಿದರು ನಿನಗೆ ಎಂದ.

ಭಾರತಿ 'ರಾತ್ರಿ ಇಲ್ಲಿ ನುಸಿ ಬರುವುದಿಲ್ಲಾಂತ ಕಾಣಿಸುತ್ತದೆ ಅಲ್ವಾ?' ಎಂದಳು.

'ಯಾಕೆ?'

'ನಿನ್ನ ಸಿಗರೇಟು: ಮತ್ತು ನಿನ್ನ ಔಷಧಿ ಎರಡು ಸಾಕು ನುಸಿಯೇನು ಅದರ ಅಜ್ಜನೂ ಬರಲಿಕ್ಕಿಲ್ಲ. ಒಂದು ವೇಳೆ ನುಸಿ ನಿನಗೆ ಕಚ್ಚಿದರೂ ಅದು ಅಲ್ಲಿಯೇ ಅಮಲೇರಿ ಬಿದ್ದಿರುತ್ತದೆ. ಅಷ್ಟಕ್ಕೂ ನಿನಗೆ ನುಸಿ ಕಚ್ಚಿದರೆ ಗೊತ್ತಾಗಬೇಕಲ್ವಾ?' ಎಂದಳು. ಅದೂ ಒಂದು ಮಟ್ಟಿಗೆ ನಿಜ.

ಭಾರತಿ: ಯಾಕೆ?

ರಾಹುಲ 'ನನಗೆ ಕುಡಿದ ಮೇಲೆ ನುಸಿ ಕಚ್ಚಿದರೂ ಗೊತ್ತಾಗುವುದಿಲ್ಲ. ನುಸಿಯೇನು ಹಾವು ಬಂದು ಕಚ್ಚಿದರೂ...'

ಭಾರತಿ: 'ಈಗ ನಾನು ಹೇಳಿದ್ದು ಮೊದಲು ಮಾಡು. ಹೋಗಿ ಮುಖ ತೊಳ್ಕೊಂಡು ಬಾ. ನಾನು ಚಾ ಮಾಡೇನೆ. ಆಮೇಲೆ ಉಳಿದ ಸುದ್ದಿ'

ರಾಹುಲ: 'ಆಯ್ತು ಮಾರಾಯ್ತಿ ಎಂದು ತನ್ನ ಲುಂಗಿ ಸರಿ ಮಾಡುತ್ತಾ. ಮುಖ ಹೊರಳಿಸಿ ಅಂಗಳ ನೋಡಿದಳು. ಹೆಂಗಸು ಸೀರೆ ಸರಿ ಮಾಡುವುದಿದ್ದರೆ ಗಂಡಸು ಬೇರೆ ಕಡೆ ನೋಡುವುದು; ಗಂಡಸು ಡ್ರೆಸ್ ಮಾಡಿಕೊಳ್ಳುವಾಗ ಹೆಂಗಸು ಬೇರೆ ಕಡೆ ನೋಡುವುದು ಒಂದು ಸಭ್ಯ ಸಂಹಿತೆ. ರಾಹುಲ ತನ್ನ ಚಾಪೆಯನ್ನು ಮಡಿಸುತ್ತಾ ಹೇಳಿದ: "ನೀನು ಚಾ ಬೇಕಿದ್ದರೆ ಮಾಡು, ಆದರೆ, ಹಾಲಿಲ್ಲ, ನನಗೆ ಹಾಲು ಹಾಕದ ಚಾ ನಡೆಯುತ್ತದೆ. ನಿದ್ದೆಗೆಡುವವರ ಔಷಧಿಯದು." ಎಂದ.